ಶ್ರೀ ಎಚ್. ಎನ್. ನಂಜೇಗೌಡ .—ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಡಿ. ಹಲಗೇಗೌಡ .—ಈಗ ಹೊಸದಾಗಿ ಒಂದು ಅಂದಾಜನ್ನು ತಯಾರು ಮಾಡಿ ತುಮಕೂರು ಜಿಲ್ಲೆಗೆ ನೀರು ಕೊಡುತ್ತೇವೆಂದು ತಿಳಿಸಿದಿರಿ. ಬಹಳ ಸಂತೋಷ. ಆದರೆ ಈ ಮೊದಲು ತಯಾರು ಮಾಡಿದಂತಹ ಒರಿಜನಲ್ ಪ್ಲಾನು ಮತ್ತು ಎಸ್ಟಿಮೇಟನ್ನು ಬದಲಾಯಿಸುವುದನ್ನು ಗಮನದಲ್ಲಿಟ್ಟುಕೊಂಡು ಈ ತುಮಕೂರು ಜಿಲ್ಲೆಗೆ ನೀರು ಕೊಡುವ ತೀರ್ಮಾನವನ್ನು ತೆಗೆದುಕೊಂಡಿದ್ದಿರಾ?

ಶ್ರೀ ಎಚ್. ಎನ್. ನಂಜೇಗೌಡ .—ಈಗ ಮೊದಲು ಪ್ರಾಜೆಕ್ಟ್ ರಿಪೋರ್ಟ್ ಪ್ರಕಾರ ೧೧೫೦೦ ಎಕರೆಗೆ ನೀರು ಕೊಡಬೇಕೆಂದು ಇತ್ತು. ಅದು ಕೊಡತಕ್ಕಂಥಾದ್ದು ಆಗಬೇಕಾಗಿದೆ. ಇದರ ಜೊತೆಗೆ ಹಳ್ಳಿ ಮೈಸೂರು ಪ್ರದೇಶಕ್ಕೆ ನೀರು ಕೊಡಬೇಕಾಗಿದೆ. ಆಮೇಲೆ ಫ್ಲಾಕ್ಟ್ ಫೈಂಡಿಂಗ್ ಕಮಿಟಿಯವರು ರಿಪೋರ್ಟ್ ಕೊಟ್ಟನಂತರ ನಮಗೆ ಪೂರ್ಣವಾಗಿ ಎಷ್ಟು ನೀರು ಸಿಕುತ್ತದೆ ಎಂಬುದು ತಿರ್ಮಾನವಾದ ಮೇಲೆ ಈ ಯೋಜನೆಯ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ. ಕೆಲವು ಡ್ರಾಟ್ ಏರಿಯಾ ಇದೆ. ಆಂಥಾ ಪ್ರದೇಶಗಳಿಗೆ ನಾವು ನೀರನ್ನು ಕೊಡಬೇಕೆಂಬ ಮನಸ್ಸುಳ್ಳವರಾಗಿದ್ದೇವೆ.

RECOVEREY OF WATER TAX FORM CULTIVATOR OF CHIKODI TALUK

646. SRI P. P. HEGRE (Chikodi) .—Will the Minister for Revenue be pleased to state :—

(*a*) the reasons for the levy and recovery of Irrigation water tax from some cultivators of Kabbur, Hirekudi and Kothli villages in Chikodi Taluk although no water, from any Government sources, is supplied to their lands for irrigation purposes ;

(*b*) whether it is due to the mistake of some Government officials or due to some discrepancy in the Irrigation Act itself ;

(*c*) if so, whether there is any proposal before Government to rectify this misteke ?

SRI N. HUTCHAMASTHY GOWDA (Minister for Revenue) .—

(*a*) Water rate is being recovered from owners of lands to which water is actually supplied for irrigation.

(*b*) No.

(*c*) Does not arise.

ಶ್ರೀ ಪಿ. ಪಿ. ಹಗರೆ .—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ನೀರಾವರಿಗೋಸ್ಕರ ವಾಸ್ತವಿಕವಾಗಿ ನೀರು ಸರಬರಾಜು ಮಾಡಿದ ಜಮೀನಿನ ಮಾಲೀಕರಿಂದ ನೀರು ದರವನ್ನು ವಸೂಲು ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ, ಆದರೆ ಅಲ್ಲಿ ನೀರು ದೊರಕದಿದ್ದರೂ ನೀರು ದರವನ್ನು ವಸೂಲು ಮಾಡುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಇವರಲ್ಲಿ ಕೊಟ್ರುಹಳ್ಳಿಯಲ್ಲಿ ಎರಡು ಬಂಡಾರಗಳಿವೆ, ಈ ಎರಡು ಬಂಡಾರಗಳಲ್ಲಿ ವಾಟರ್ ರೇಟನ್ನು ೧೯೬೯-೭೦ನೇ ಇಸಯಲ್ಲಿ ಹಾಕಿಲ್ಲ. ೧೯೭೦-೭೧ನೇ ಇಸವಿಯಲ್ಲಿ ವಾಟರ್ ರೇಟ್ ಹಾಕಿದೆ ಆದನ್ನು ವಸೂಲು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ. ಹಿರೇಕುಡಿಯಲ್ಲಿ ೨ ಬಂಡಾರಗಳಿವೆ ಇದರಲ್ಲಿ ೧೯೬೯-೭೦, ೭೦-೭೧ಕ್ಕೆ ವಾಟರ್ ರೇಟ್ ಹಾಕಿಲ್ಲ. ಈಚೆಗೆ ಇಲ್ಲಿ ನೀರನ್ನು ಒದಗಿಸಲಾದೆ. ಈಚೆಗೆ ನೀರನ್ನು ಒದಗಿಸಿದ ಮೇಲೆ ವಾಟರ್ ರೇಟ್ ಹಾಕುವಂತಹ ಕ್ರಮವನ್ನು ಕೈಗೊಳ್ಳಬೇಕಾಗಿದೆ ಕಬ್ಬೂರಿನಲ್ಲಿ ಹೊಸ ವಾಟರ್ ರೇಟ್ ಪ್ರಕಾರ ರೇಟನ್ನು ವಿಧಿಸಬೇಕಾಗಿದೆ. ಆಲ್ಲಿ ೧೯೬೯- ರಿಂದ ೧೯೭೧-೭೨ರ ವರೆಗೆ ವಾಟರ್ ರೇಟ್ ಹಾಕಿಲ್ಲ. ಈ ಪ್ರಶ್ನೆಯಲ್ಲಿ ಇರುವ ಹಾಗೆ ಈಚೆಗೆ ಆ ಪ್ರದೇಶಗಳಲ್ಲಿ ನೀರು ಒದಗಿಸಿರುವುದರಿಂದ ಅಲ್ಲಿ ಎಷ್ಟು ಎಕರೆ ಜಮೀನು ಇದೆ ಎಂಬುದನ್ನು ತಿಳಿದುಕೊಂಡು ಅಲ್ಲಿ ವಾಟರ್ ರೇಟ್ ಹಾಕಬೇಕಾಗಿದೆ.

ಶ್ರೀ ಪಿ. ಪಿ. ಹೆಗಡೆ .—ಕಬ್ಬೂರಿನಲ್ಲಿ ಈಗ ೩-೪ ವರ್ಷಗಳಿಂದಲೂ ಮಳೆಯೇ ಇಲ್ಲ. ಕೆರೆಯಲ್ಲಿ ನೀರೂ ಇಲ್ಲ, ಅಲ್ಲಿ ನೀರೂ ಕೊಟ್ಟೂ ಇಲ್ಲ. ಆದರೆ ಈ ವರ್ಷದಲ್ಲಿ ವಾಟರ್ ರೇಟ್ ಅನ್ನು ವಸೂಲು ಮಾಡುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ನಾನು ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ ಅಲ್ಲಿ ಯಾವ ವರ್ಷ ನೀರು ಬಂದಿದೆ ಎಂಬುದನ್ನು ತಿಳಿಸಬೇಕೆಂದು. ಆದ್ದರಿಂದ ಅಲ್ಲಿ ಯಾವ ವರ್ಷ ನೀರು ಕೊಟ್ಟಿದೆ ಎಂಬುದನ್ನು ತಿಳಿದುಕೊಂಡು ಅಲ್ಲಿ ವಾಟರ್ ರೇಟ್ ಹಾಕಬೇಕಾಗುತ್ತದೆ.

ಶ್ರೀ ಪಿ. ಪಿ. ಹೆಗಡೆ .—ಅಲ್ಲಿ ನೀರು ಕೊಟ್ಟೇ ಇಲ್ಲ. ಇದನ್ನು ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಅಲ್ಲಿ ನೀರು ಕೊಟ್ಟೇ ಇಲ್ಲ ಎಂದು ಮಾನ್ಯ ಸದಸ್ಯರು ಹೇಳುವುದನ್ನು ನಂಬಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಂದ ಆ ಬಗ್ಗೆ ವರದಿ ಬಂದಮೇಲೆ ಆ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ವಿ ಎನ್. ಪಾಟೀಲ್ .— ಈಗ ಮಾನ್ಯ ಮಂತ್ರಿಗಳು ಹೇಳಿದರು ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡ ಮೇಲೆ ಅಲ್ಲಿ ವಿಚಾರ ಏನಾಗಿದೆ ಎಂಬುದು ಗೊತ್ತಾಗುತ್ತದೆ ಎಂದು. ಆದರೂ ಕೂಡ ಆ ಏರಿಯಾದ ಒಬ್ಬರು ಸದಸ್ಯರು ಅಲ್ಲಿ ನೀರು ಕೊಟ್ಟಿಲ್ಲ ಎಂದು ಹೇಳುವಾಗ ಅಧಿಕಾರಿಗಳಿಂದ ರಿಪೋರ್ಟ್ ಬರುವವರೆಗೂ ವಾಟರ್ ರೇಟನ್ನು ವಸೂಲು ಮಾಡದಂತೆ ತಡೆ ಆರ್ಡರ್ ಕಳುಹಿಸುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ .—ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಆ ಮಾನ್ಯ ಸದಸ್ಯರು ಹೇಳುವುದನ್ನು ನಂಬಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಂದ ಆ ಬಗ್ಗೆ ವರದಿಯನ್ನು ತರಿಸಿಕೊಂಡಮೇಲೆ ಅಲ್ಲಿ ವಾಟರ್ ರೇಟ್ ಹಾಕಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳಿಂದ ವರದಿ ಬರುವವರೆಗೂ ವಾಟರ್ ರೇಟ್ ವಸೂಲು ಮಾಡುವುದಕ್ಕೆ ತಡೆ ಇದ್ದೇ ಇರುತ್ತದೆ.

SELECTION FOR THE POSTS OF DEPUTY REGISTRAR OF CO-OPERATIVE SOCIETIES

656. SRI M. P. RAMASWAMY (Anekal) —Will the Minister for Co-operation be pleased to state :—

(*a*) the procedures adopted in selecting the Deputy Registrar of Co-operative Societies ;

(*b*) the reason for selecting thirty persons for the Deputy Registrar's post when there are no sufficient vacancies ?

SRI A. SHANKARA ALVA (Minister for Co-operation) .—

(*a*) As per the Cadre and Recruiment Rules of the Department of Co operation, the posts of Deputy Registrar of Co-operative Societies are filled up by promotion by selection from the Cadre of Assistant Registrars of Co-operative Societies who have put in 3 years of service as Assistant Registrar of Co operative S cieties. The selection is made by a Committee called the Departmental Pro otion C mmittee constituted by Government comprising of secretary, DHPC Department Registrar of Co-operative Societies and Senior Joint Registrar of Co-operativ Societies.

(*b*) Keeping in view the then existing vacancies and the vacancies that would be available in the near future, only 31 candidates were selected.